# ಗುರುದೇವ



ಇಂದು ರವಿತಾರೆ ಹಿಮಗಿರಿ ಗಂಗೆ ಗೋದಾ ಸಿಂಧು ಶುಭ ಜಲ ನಿಧಿಗಳೆಲ್ಲವು
ಚಂದದಲಿ ಮೆರೆವನ್ನೆಗಂ ಬಂದ "ಶ್ರೀ ಗುರುದೇವ" ಪೊರೆಯಲಿ ಶಿಷ್ಯ ಬಳಗವನು

ಧಾರ್ಮಿಕ ಮಾಸಿಕ ಪತ್ರಿಕೆ

ಶ್ರೀ ಹೊಂಬುಜ ಅತಿಶಯ ಮಹಾಕ್ಷೇತ್ರ ಶ್ರೀ ವೀರನಿರ್ವಾಣ ಶಕವರ್ಷ 2551/ಶ್ರೀ ವಿಶ್ವಾವಸು ನಾಮ ಸಂವತ್ಸರ

ಪುಟ : ೪ ಸಂಪುಟ : ೭೧ ಸಂಚಿಕೆ : ೧೨

**15-12-2025 ಮಾರ್ಗಶಿರ ಮಾಸ : ಕೃಷ್ಣ ಪಕ್ಷ ಸೋಮವಾರ**

RNI No. 13248/57-POSTEL REGD No. KA/SK/SMG 198/2024-26

ಪರಮ ಸಂರಕ್ಷಕರು, ಸ್ವಾಮಿತ್ವ, ಪ್ರಧಾನ ಸಂಪಾದಕರು : ಜಗದ್ಗುರು ಸ್ವಸ್ತಿಶ್ರೀ ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಗಳವರು, ಶ್ರೀಕ್ಷೇತ್ರ ಹೊಂಬುಜ


**ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮೀಜಿ, ಶ್ರೀಕ್ಷೇತ್ರ ಹೊಂಬುಜ**

## ಶುಭಾಶೀರ್ವಚನ

## "ಆತ್ಮ ಪರೀಕ್ಷೆ"

ಸಹೃದಯರೇ,

ಅನೇಕ ಬಾರಿ ಜನರು ಅಧ್ಯಾತ್ಮ ಜೀವನವನ್ನು ಬದುಕುವ ಬಗ್ಗೆ ಹುಡುಕಾಟದಲ್ಲಿ ಇರುತ್ತಾರೆ. ಹಾಗಾದರೆ ಆಧ್ಯಾತ್ಮವನ್ನು ಜೀವನದಲ್ಲಿ ಹೇಗೆ ಅಳವಡಿಸಿಕೊಳ್ಳುವುದು ಅಥವಾ ಹೇಗೆ ಬದುಕುವುದು? ಎಂಬುದು ಪ್ರಶ್ನೆ ಬರುತ್ತದೆ. ಪ್ರಸ್ತುತ ಪ್ರಶ್ನೆಗೆ ಸಮಾಧಾನದ ಉತ್ತರವೆಂದರೆ ಆಧ್ಯಾತ್ಮವು ಜೀವನದ ಆಧಾರವಾಗಿದೆ. ಜೀವನವು ಆಧ್ಯಾತ್ಮಿಕವಾಗಿಸಲು ಮೊದಲು ಆತ್ಮಪರೀಕ್ಷೆ (ಸಮೀಕ್ಷೆ) ಮುಖ್ಯವಾಗಿದೆ.

ಎಲ್ಲಿಯವರೆಗೆ ನಮ್ಮ ತಪ್ಪುಗಳು ನಮಗೆ ತಿಳಿಯುವುದಿಲ್ಲ ಅಲ್ಲಿಯವರೆಗೆ ಸುಧಾರಣೆ ಮಾಡಲು ಸಾಧ್ಯವಿಲ್ಲ. ಹೀಗೆಯೇ ನಮ್ಮ ಜೀವನದಲ್ಲಿ ಬರುವ ನಾನಾ ಕಷ್ಟ-ಕಾರ್ಪಣ್ಯಗಳು ನಮ್ಮ ನ್ಯೂನತೆಗಳಿಂದಲೇ ಅರ್ಥವಾಗುವುದು. ಮನುಷ್ಯ ತನ್ನ ಪ್ರಶಂಸೆಯನ್ನು ಮಾತ್ರ ಬಯಸುತ್ತಾನೆ. ಯಾರಾದರೂ ನಿಂದೆ ಮಾಡಿದಲ್ಲಿ ವ್ಯಥೆ ಪಡುತ್ತಾನೆ ಹಾಗೂ ಆ ನಿಂದೆಯ ಕಾರಣವನ್ನು ದೂರ ಮಾಡಲು ಬಯಸುತ್ತಾನೆ. ಉದಾಹರಣೆಗೆ ಒಬ್ಬ ವ್ಯಕ್ತಿ ಮದ್ಯಪಾನಿಯಾಗಿರುತ್ತಾನೆ. ಆದರೆ ಯಾರಿಗೂ ತಿಳಿದಿರುವುದಿಲ್ಲ. ಒಂದೊಮ್ಮೆ ಯಾರಿಗಾದರೂ ತಿಳಿದಲ್ಲಿ ಅವರಿಂದ ಮದ್ಯಪಾನದ ಹಾನಿಯ ಬಗ್ಗೆ ಬುದ್ಧಿಹೇಳಿಸಿಕೊಳ್ಳುತ್ತಾನೆ. ಆ ವ್ಯಕ್ತಿ ಆ ವಾತಾವರಣದಿಂದ ಹೊರಬರಲು ಪ್ರಯತ್ನಿಸುತ್ತಾನೆ. ಅಥವಾ ನಂತರ ಕದ್ದು-ಮುಚ್ಚಿ ತನ್ನ ಅಭ್ಯಾಸ ಮುಂದುವರಿಸುತ್ತಾನೆ ಅಥವಾ ಬುದ್ಧಿ ಹೇಳುವ ಜನರ ಹತ್ತಿರವು ಬರುವುದಿಲ್ಲ. ಸಂಭಾವನೆಗಳು ಯಾವುದೇ ಇರಬಹುದು. ವ್ಯಕ್ತಿ ಮಾತ್ರ ಬೇರೆಯವರು ತನ್ನ ನಿಂದೆ ಮಾಡುವುದನ್ನು ಬಯಸುವುದಿಲ್ಲ. ಮನುಷ್ಯನು ಸದಾ ಪ್ರಶಂಸೆಯಿಂದ ಪ್ರಸನ್ನನಾಗಿ ನಿಂದೆಯಿಂದ ದುಃಖಿತನಾಗುತ್ತಾನೆ. ಹೀಗೆ ತನಗೆ ಒಳ್ಳೆಯದೆನಿಸುವ ಕಾರ್ಯಗಳನ್ನು ಮತ್ತು ನಿಂದೆಯೆನಿಸುವ ಕ್ರಿಯೆಗಳಿಂದ ದೂರವಿರುವುದೇ ಆತ್ಮಪರೀಕ್ಷೆ ಅಥವಾ ಆತ್ಮಸಮೀಕ್ಷೆಯಿದೆ.

ನಾವು ಕೊಡುವ ತರಗತಿಯ ಪರೀಕ್ಷೆಯ ಮೌಲ್ಯ ಮಾಪನ ಶಿಕ್ಷಕರು ಮಾಡುತ್ತಾರೆ. ಆದರೆ ಆಧ್ಯಾತ್ಮ ಜೀವನದ ಪರೀಕ್ಷೆಯನ್ನು ಉತ್ತಮ ಗುರು ಅಥವಾ ಮಾರ್ಗದರ್ಶಕರು ಮಾಡುತ್ತಾರೆ. ಇಲ್ಲವೇ ನಮ್ಮ ಸ್ವಯಂ ಪರೀಕ್ಷೆಯ ಮೂಲ್ಯಾಂಕನ ಮಾಡಿಕೊಳ್ಳಲು ಹೇಳುತ್ತಾರೆ. ನಮಗಿಂತ ನಮ್ಮ ಅಂತರಂಗವನ್ನು ಬಲ್ಲವರು ಯಾರು ಇಲ್ಲ. ಆಧ್ಯಾತ್ಮದ ಜೀವನದಲ್ಲಿ ಆತ್ಮಪರೀಕ್ಷೆ ಅತ್ಯಂತ ಅಗತ್ಯವಾಗಿರುತ್ತದೆ. ಆಗಲೇ ಸಾಧನೆಯ ಶಿಖರವೇರಲು ಸಾಧ್ಯವಾಗುತ್ತದೆ.

WWW.HOMBUJAPADMAVATI.ORG

ಒಂದು ಕಾಡಿನಲ್ಲಿ ಒಬ್ಬ ಸಾಧು ಅನೇಕ ವರ್ಷಗಳಿಂದ ಸಾಧನೆ ಮಾಡುತ್ತಾ ಇದ್ದರು. ಆದರೆ ಅವರಿಗೆ ಯಾವುದೇ ಯಶಸ್ಸು ಅಥವಾ ಅದರಿಂದ ನೆಮ್ಮದಿ ಅನಿಸಿರಲಿಲ್ಲ. ಒಮ್ಮೆ ಅದೇ ಕಾಡಿನ ಮಾರ್ಗದಲ್ಲಿ ಇನ್ನೊಬ್ಬ ತಪಸ್ವಿ ಸಾಧುಗಳು ಹಾದು ಹೋಗುತ್ತಿದ್ದರು. ವಿಶ್ರಾಂತಿಗೆಂದು ಈ ಸಾಧುಗಳ ಗುಡಿಸಲ್ಲಿ ಉಳಿದುಕೊಂಡರು. ಪರಸ್ಪರ ಪರಿಚಯ ಮಾಡುಕೊಂಡು, ಚರ್ಚೆ ಮಾಡುತ್ತಾ ಮೊದಲಿನ ಸಾಧುವು ಇನ್ನೊಬ್ಬ ಸಾಧುಗಳ ವಿದ್ವತ್ತಿನಿಂದ ಆಕರ್ಷಿತನಾದ. ತನ್ನ ಸಾಧನೆಯ ಬಗ್ಗೆ ತಿಳಿದುಕೊಳ್ಳಲು ಬಯಸುತ್ತಾನೆ.

ಅಂತೆಯೇ ಆ ಸಾಧು ತನ್ನ ಎಲ್ಲಾ ಪೂರ್ವಪರವನ್ನು ಹೇಳಿ, ಇಷ್ಟು ವರ್ಷ ಸಾಧನೆ ಮಾಡಿದರೂ ನನಗೆ ಯಾವುದೇ ಸಫಲತೆ ಸಿದ್ಧಿಯಾಗದಿರುವುದಕ್ಕೆ ಕಾರಣ ಕೇಳುತ್ತಾನೆ. ಅದಕ್ಕೆ ಆ ಸಾಧುಗಳು ಸ್ವಲ್ಪ ಯೋಚಿಸಿ ಒಂದು ಕಥೆಯನ್ನು ಹೇಳುತ್ತಾರೆ.

ಒಂದು ಕಡೆ ಓಡಾಡುತ್ತಾ 2 ಇರುವೆಗಳು ಪರಸ್ಪರ ಭೇಟಿಯಾಗುತ್ತವೆ. ಒಂದು ಇರುವೆ ಸಕ್ಕರೆಯ ರಾಶಿಯಲ್ಲಿ ಇರುವ ಇರುವೆಯೆಂದು ಇನ್ನೊಂದು ಉಪ್ಪಿನ ರಾಶಿಯಲ್ಲಿ ಇರುವುದೆಂದು ತಿಳಿಯುತ್ತದೆ. ಪರಸ್ಪರ ತಮ್ಮ ಅನುಭವ ಹೇಳುತ್ತಾ ಸಕ್ಕರೆ ರಾಶಿಯಲ್ಲಿ ಇರುವಂತ ಇರುವೆ ತನ್ನ ಬಗ್ಗೆ ತಾನು ಅತ್ಯಂತ ಸಂತೋಷದಿಂದ ಇದ್ದೇನೆಯೆಂದು ಹೇಳುತ್ತದೆ. ಇನ್ನೊಂದು ಉಪ್ಪಿನ ರಾಶಿಯಲ್ಲಿರುವ ಇರುವೆಯು ಕೂಡ ನಾನು ಸಹ ಚೆನ್ನಾಗಿರುವೆ. ಆದರೆ ಯಾವಾಗಲು ಉಪ್ಪಿನ ಸ್ವಾದದಲ್ಲೇ ಬದುಕಿರುವೆ ಎಂದೇಳುತ್ತದೆ. ಅದಕ್ಕೆ ಸಕ್ಕರೆಯ ಹತ್ತಿರ ಇರುವಂತ ಇರುವೆಯು ಇನ್ನೊಂದು ಇರುವೆಯನ್ನು ತನ್ನೊಡನೆ ಕರೆದುಕೊಂಡು ಹೋಗುತ್ತದೆ. ಸಕ್ಕರೆ ರಾಶಿಯನ್ನು ನೋಡಿ ತಿನ್ನಲು ಪ್ರಯತ್ನಿಸುತ್ತದೆ. ಇನ್ನೊಂದು ಇರುವೆ ಕೇಳಲು ಇನ್ನು ನನ್ನ ಬಾಯಲ್ಲಿ ಉಪ್ಪಿನ ರುಚಿಯು ಬರುತ್ತಿದೆ ಎನ್ನುತ್ತದೆ. ಇನ್ನೊಂದು ಇರುವೆ ಉಪ್ಪಿನ ರಾಶಿಯ ಇರುವೆ ಬಾಯಲ್ಲಿ ಉಪ್ಪಿನ ಕಾಳನ್ನು ಇಟ್ಟುಕೊಂಡಿರುವುದನ್ನು ಗಮನಿಸುತ್ತದೆ. "ನೀನು ಇನ್ನು ಉಪ್ಪನ್ನು ಬಾಯಲ್ಲಿ ಯಾಕೆ ಇಟ್ಟುಕೊಂಡಿರುವೆ" ಎಂದು ಕೇಳಲು ಇನ್ನೊಂದು ಇರುವೆ "ನಾನು ಹೊರಡುವಾಗ ಒಂದು ವೇಳೆ ಸಕ್ಕರೆಯು ನನಗೆ ಸಿಗದೇ ಇದ್ದಲ್ಲಿ ತಿನ್ನಲು ಉಪ್ಪು ಇರಲಿ" ಎಂದು ಬಾಯಲ್ಲಿಟ್ಟುಕೊಂಡಿದ್ದೆ. ಈಗ ಅದನ್ನು ಬಿಡುತ್ತೇನೆ ಎಂದು ಸಕ್ಕರೆಯ ಸ್ವಾಧವನ್ನು ಅನುಭವಿಸುತ್ತದೆ.

ಈ ಕಥೆಯನ್ನು ಸಾಧುಗಳು ಹೇಳಿ ಅರ್ಥವಾಯಿತಾ ಎಂದು ಕೇಳುತ್ತಾರೆ. ಕಾಡಿನಲ್ಲಿದ್ದ ಸಾಧು ಇಲ್ಲವೆಂದು ಹೇಳಲು ಆಗ ಅವರು "ನೀನು ಕೂಡ ನಿನ್ನಲ್ಲಿರುವ ಉಪ್ಪಿನಂತ ದೋಷದ ವಸ್ತುವನ್ನು ಬಿಟ್ಟುಬಿಡು" ಎಂದು ಹೇಳುತ್ತಾರೆ. ಹಿಂದೆ ಆತ ಒಬ್ಬ ಶ್ರೀಮಂತನಾಗಿರುತ್ತಾನೆ. ಸಂಸಾರದಲ್ಲಿ ಬಂದಂತ ಕೆಲವು ಕಷ್ಟಗಳಿಂದ ಬೇಸತ್ತು ಸನ್ಯಾಸಿಯಾಗಿರುತ್ತಾನೆ. ಕಾಡಿಗೆ ಬರುವಾಗ ಒಂದು ವೇಳೆ ಸಾಧನೆ ಮಾಡಿದರೆ ಸಿದ್ಧಿಯಾಗದೆ ಇದ್ದಲ್ಲಿ ಮತ್ತೆ ಬದುಕು ಸಾಗಿಸಲು ಬೇಕೆಂದು ಒಂದು ವಜ್ರವನ್ನು ತಂದಿರುತ್ತಾನೆ. ಅದನ್ನು ತನ್ನ ಗುಡಿಸಲ ಹಿಂದೆ ಬಚ್ಚಿಟ್ಟಿರುತ್ತಾನೆ. ಆತನಿಗೆ ತನ್ನ ತಪ್ಪಿನ ಅರಿವಾಯಿತು. ವಜ್ರವನ್ನು ಮಹಾತ್ಮರಿಗೆ ನೀಡಿ ಒಳ್ಳೆಯ ಕಾರ್ಯಗಳಿಗೆ ಬಳಸಿ ಎಂದೇಳುತ್ತಾನೆ.

ಜೀವನದಲ್ಲಿ ನಾವುಗಳು ಹೀಗೆಯೇ ನಮ್ಮ ತಪ್ಪಿನ ಅರಿವಾಗದೇ ಉತ್ತಮ ಫಲವನ್ನು ಬಯಸುತ್ತಿರುತ್ತೇವೆ. ಒಳ್ಳೆಯ ಸಾಧನೆಗೆ ತನ್ನ ಆತ್ಮ ಪರೀಕ್ಷೆ ಅಥವಾ ನಿರೀಕ್ಷಣೆ ಮುಖ್ಯ.

ಹೊಸ ವರ್ಷದಲ್ಲಿ ಇದೇ ಭರವಸೆಯಲ್ಲಿ ಮುಂದೆ ಸಾಗುವ. ಹಿಂದೆ ಇಟ್ಟ ಹೆಜ್ಜೆಯನ್ನು ಮುಂದೆ ಸರಿಯಾಗಿ ಹಾಕುತ್ತಾ ಸಾಗುವ ನಮ್ಮ ನಿರೀಕ್ಷೆ ನಮ್ಮ ಉತ್ತಮ ಜೀವನಕ್ಕಾಗಿ ಇರಲೆಂದು ಪ್ರಯತ್ನಿಸುವ.

**ಹೊಸ ವರ್ಷದ ಶುಭಾಶಯಗಳು.**

**ಶ್ರೀಕ್ಷೇತ್ರ ಕಂಬದಹಳ್ಳಿ : ಭಟ್ಟಾರಕ ಸಮಾವೇಶ**

## "ಜೈನ ಧರ್ಮೀಯರು ಸಮಭಾವ, ಸಮಚಿತ್ತದಿಂದ ಆದರ್ಶರಾಗಿರಿ"

ಪರಮಪೂಜ್ಯ ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ



**ಕಂಬದಹಳ್ಳಿ :** "ಪ್ರಾಚೀನ ಧರ್ಮಗಳಲ್ಲಿ ಜೈನ ಧರ್ಮದ ತತ್ವ-ಸಿದ್ಧಾಂತ, ತೀರ್ಥಂಕರರ ಉಪದೇಶಗಳು, ಗ್ರಂಥಗಳು ವಿಶ್ವಮಾನ್ಯವಾದುದು. ಪ್ರಸಕ್ತ ವಿದ್ಯಮಾನದಲ್ಲಿ ಜೈನ ಧರ್ಮೀಯರು ಉತ್ತಮ ಸಂಸ್ಕಾರ, ಸಂಸ್ಕೃತಿಯನ್ನು ಮರೆಯಬಾರದು. ಸರ್ವ ಜೈನ ಧರ್ಮೀಯರು ಜಿನಾಗಮೋಕ್ತ ಶಾಸ್ತ್ರದನ್ವಯ ಪೂಜಾ ವಿಧಿ-ವಿಧಾನಗಳಲ್ಲಿ ಸಮಭಾವ-ಸಮಚಿತ್ತದಿಂದ ಶ್ರದ್ಧಾ ಭಕ್ತಿಪೂರ್ವಕ ಪಾಲ್ಗೊಳ್ಳಬೇಕು" ಎಂದು ಅತಿಶಯ ಶ್ರೀಕ್ಷೇತ್ರ ಹೊಂಬುಜ ಜೈನ ಶ್ರೀಮಠದ ಪೀಠಾಧೀಶರಾಗಿರುವ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮಿಗಳವರು ಧರ್ಮಸೂಕ್ತವನ್ನು ವಿವರಿಸಿದರು.

ಅವರು ನ. 06ರ ಶನಿವಾರದಂದು ಕಂಬದಹಳ್ಳಿ ಶ್ರೀ ಜೈನ ಮಠದಲ್ಲಿ ಸಮಸ್ತ ಭಟ್ಟಾರಕ ಮಹಾಸ್ವಾಮಿಗಳವರ ಸಮಾವೇಶದಲ್ಲಿ "ಜೈನ ಸಮಾಜದಲ್ಲಿ ಗೊಂದಲದ ಜಿಜ್ಞಾಸೆಗಳ ಚರ್ಚೆ ಮಾಡದೇ "ಅಹಿಂಸಾ ಪರಮೋ ಧರ್ಮಃ", "ಪರಸ್ಪರೋಪಗ್ರಹನಾಂ ಜೀವನಾಂ" ಎಂಬ ಮೂಲ ಸಿದ್ಧಾಂತವನ್ನು ಜೀವನದಲ್ಲಿ ರೂಢಿಸಿಕೊಳ್ಳುವುದರಿಂದ ಮಾನಸಿಕ ಶಾಂತಿ, ತೃಪ್ತಿ ಲಭಿಸುತ್ತದೆ" ಎಂದು ಹೇಳಿದರು. "ಪೂರ್ವ ಪರಂಪರೆಯನ್ನು ಉಳಿಸಿ, ಬೆಳೆಸಿಕೊಳ್ಳಬೇಕಾದ ಅವಶ್ಯಕತೆ ಇದೆ. ಜಿನಮಂದಿರ, ಜೈನ ಸ್ಮಾರಕಗಳ ರಕ್ಷಣೆಗೆ ಆದ್ಯತೆ ನೀಡಿ, ಜೈನ ಧರ್ಮದ ಹಿರಿಮೆ-ಗರಿಮೆಗಳನ್ನು ಪಸರಿಸುವುದು ಸದ್ಧರ್ಮ ಸತ್ಕಾರ್ಯ ಆಗಿದೆ" ಎಂಬ ಅಂಶವನ್ನು ತಿಳಿಹೇಳಿದರು.

2ನೇ ಪುಟಕ್ಕೆ

## ಬೃಹತ್ ಪಂಚಪರಮೇಷ್ಠಿ ಆರಾಧನೆ



ಬೆಂಗಳೂರು : ಇಲ್ಲಿಯ ಜೆ.ಪಿ. ನಗರದ ಪುಟ್ಟೇನಹಳ್ಳಿಯ ಭಗವಾನ ಶ್ರೀ 1008 ಶೀತಲನಾಥ ಬಸದಿಯಲ್ಲಿ ಪರಮಪೂಜ್ಯ 108 ಆಚಾರ್ಯ ಪುಣ್ಯಸಾಗರ ಮಹಾರಾಜರು ಹಾಗೂ ಪರಮಪೂಜ್ಯ 108 ಪುರಾಣ ಸಾಗರ ಮಹಾರಾಜರ ಪಾವನ ಸಾನಿಧ್ಯ, ನೇತೃತ್ವ ಹಾಗೂ ಮಾರ್ಗದರ್ಶನದಲ್ಲಿ ಹೊಂಬುಜ ಜೈನ ಮಠದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಗಳವರ ಉಪಸ್ಥಿತಿಯಲ್ಲಿ ಡಿ. 14, 2025ರ ಭಾನುವಾರದಂದು 'ಬೃಹತ್ ಪಂಚಪರಮೇಷ್ಠಿ' ಆರಾಧನೆಯನ್ನು ಅದ್ದೂರಿಯಾಗಿ ನೆರವೇರಿಸಲಾಯಿತು.

2ನೇ ಪುಟಕ್ಕೆ

## "ಜೈನ ಧರ್ಮೀಯರು ಸಮಭಾವ, ಸಮಚಿತ್ತದಿಂದ ಆದರ್ಶರಾಗಿರಿ"

1ನೇ ಪುಟದಿಂದ

ಪರಮಪೂಜ್ಯ ಜಗದ್ಗುರು ಭಟ್ಟಾರಕ ಮಹಾಸ್ವಾಮಿಗಳವರ ಅಧಿವೇಶನದಲ್ಲಿ ಅರಹಂತಗಿರಿ, ಕನಕಗಿರಿ ಕಂಬದಹಳ್ಳಿ, ಶ್ರವಣಬೆಳಗೊಳ, ಸಿಂಹನಗದ್ದೆ, ಆರತಿಪುರ, ಕೊಲ್ಹಾಪುರ ಮಹಾಸ್ವಾಮೀಜಿಗಳವರು ಜೈನ ಸಮಾಜದಲ್ಲಿ ಧರ್ಮ ಜಾಗೃತಿ, ಧರ್ಮಪ್ರಭಾವನೆ, ಧರ್ಮ ಸಂಸ್ಕಾರಗಳ ಕುರಿತು ಅಭಿಪ್ರಾಯ ವ್ಯಕ್ತಪಡಿಸಿದರು.

## ಬೃಹತ್ ಪಂಚಪರಮೇಷ್ಠಿ ಆರಾಧನೆ

1ನೇ ಪುಟದಿಂದ

ಆರಾಧನೆಯ ನಂತರ ಪರಮಪೂಜ್ಯ ಭಟ್ಟಾರಕರಿಂದ ದಾನಿಗಳಾದ ಶ್ರೀ ಪಂಕಜ, ಶ್ರೀಮತಿ ಪದ್ಮಾವತಿ, ಮಲ್ಲೇಶ್ವರಂ, ಶ್ರೀಮತಿ ಪದ್ಮಾಬ್ರಹ್ಮಪ್ಪ, ಶ್ರೀ ಅಭಿನಂದನ್ ಪಡಿವಾಳ್‌ರವರುಗಳನ್ನು ಆಶೀರ್ವದಿಸಲಾಯಿತು. ನಂತರ ಟ್ರಸ್ಟಿನ ಪದಾಧಿಕಾರಿಗಳು ಹಾಗೂ ಪಡಿವಾಳ್ ಕುಟುಂಬದವರಿಂದ ಭಟ್ಟಾರಕರಿಗೆ ಪಾದಪೂಜೆ ಮಾಡಲಾಯಿತು. ಪುರೋಹಿತರಾದ ಪ್ರತಿಷ್ಠಾಚಾರ್ಯ ಪಾರ್ಶ್ವನಾಥಯ್ಯ ಜೆ. ಪೂಜಾ ವಿಧಿ-ವಿಧಾನಗಳನ್ನು ನೆರವೇರಿಸಿದರು. ಅಭಿನಂದನ್ ಪಡಿವಾಳ್ ಮತ್ತು ಕುಟುಂಬದವರು ಆರಾಧನೆಯ ಸೇವಕರ್ತರಾಗಿದ್ದರು. ಟ್ರಸ್ಟಿನ ಪದಾಧಿಕಾರಿಗಳು ಮತ್ತು ಕಾರ್ಯಕಾರಿ ಸಮಿತಿ ಸದಸ್ಯರು, ಶ್ರಾವಕ-ಶ್ರಾವಕಿಯರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಪುಣ್ಯಲಾಭ ಪಡೆದರು.

### ಹೊಂಬುಜ ಜೈನ ಮಠಕ್ಕೆ ಶ್ರವಣಬೆಳಗೊಳ ಶ್ರೀಗಳ ಭೇಟಿ

## "ಐತಿಹಾಸಿಕ-ಧಾರ್ಮಿಕ ಮೌಲ್ಯಗಳ ಅತಿಶಯ ಇಷ್ಟಾರ್ಥ ಸಿದ್ಧಿಗಾಗಿ ಭಕ್ತರ ಶ್ರದ್ಧಾಭಕ್ತಿಗೆ ಆಶ್ರಯ"

### ಪರಮಪೂಜ್ಯ ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಪಂಡಿತಾಚಾರ್ಯವರ್ಯ ಮಹಾಸ್ವಾಮೀಜಿ



WWW.HOMBUJAPADMAVATI.ORG

**ಹೊಂಬುಜ :** **"ಪ್ರಾಚೀನ ಜೈನ ತೀರ್ಥಕ್ಷೇತ್ರಗಳಲ್ಲಿ ಹೊಂಬುಜದ ಭಗವಾನ ಶ್ರೀ ಪಾರ್ಶ್ವನಾಥ ತೀರ್ಥಂಕರ, ಜಗನ್ಮಾತೆ ಶ್ರೀ ಪದ್ಮಾವತಿ ದೇವಿ ಅತಿಶಯವು ಭಕ್ತರಿಗೆ ಇಷ್ಟಾರ್ಥ ಪ್ರಾರ್ಥನೆಯನ್ನು ನೆರವೇರಿಸುವ ಪುಣ್ಯ ಧಾರ್ಮಿಕ ಸಾನಿಧ್ಯವಾಗಿದೆ"** ಎಂದು ಶ್ರವಣಬೆಳಗೊಳ ಜೈನ ಮಠದ ಪೀಠಾಧೀಶರಾದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮಿಗಳವರು ಹೊಂಬುಜ ಜಿನಮಂದಿರಗಳ ದರ್ಶನಾರ್ಥ ಆಗಮಿಸಿ, ಧರ್ಮ ಪ್ರವಚನ ನೀಡಿದರು. ಐತಿಹಾಸಿಕ ಮತ್ತು ಜೈನಧರ್ಮ ಪರಂಪರೆಯ ಔನ್ನತ್ಯವನ್ನು ಸಾದರಪಡಿಸಿದ ಅಪೂರ್ವ ಕ್ಷೇತ್ರವಾಗಿದ್ದು, ಪೂರ್ವ ಭಟ್ಟಾರಕದ ಆಶಯಗಳನ್ನು ಪ್ರಸಕ್ತ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಗಳು ಊರ-ಪರವೂರ ಭಕ್ತರ ಸಹಯೋಗದೊಂದಿಗೆ, ಪೂಜ್ಯ ಮುನಿವರ್ಯರ, ಆರ್ಯಿಕೆಯರ, ಭಟ್ಟಾರಕ ಸ್ವಾಮೀಜಿಗಳವರ ಹಾಗೂ ವಿದ್ವಾಂಸರ ಮಾರ್ಗದರ್ಶನದಲ್ಲಿ ಪುನರುಜ್ಜೀವನಗೊಳಿಸುವ ಸದ್ಧರ್ಮ ಸತ್ಕಾರ್ಯವು ಮಾದರಿಯಾಗಿದೆ ಎಂದು ಹೊಂಬುಜ ಕ್ಷೇತ್ರದ ಅಭಿವೃದ್ಧಿ ಕುರಿತು ಶ್ಲಾಘಿಸಿ, ತಮ್ಮ ಸಹಕಾರವೂ ಇದೆಯೆಂದರು.

ಜಗನ್ಮಾತೆ ಶ್ರೀ ಪದ್ಮಾವತಿ ದೇವಿ, ಶ್ರೀ ನೇಮಿನಾಥ ಸ್ವಾಮಿ, ಶ್ರೀ ಪಾರ್ಶ್ವನಾಥ ಸ್ವಾಮಿ, ಶ್ರೀ ಮಹಾವೀರ ಸ್ವಾಮಿ, ಶ್ರೀ ಆದಿನಾಥ ಸ್ವಾಮಿ, ಶ್ರೀ ಕೂಷ್ಮಾಂಡಿನಿ ದೇವಿ, ಶ್ರೀ ಸರಸ್ವತಿ ದೇವಿ, ಶ್ರೀ ಕ್ಷೇತ್ರಪಾಲ ಹಾಗೂ ನಾಗದೇವರ ಸನ್ನಿಧಿಯಲ್ಲಿ ವಿಶೇಷ ಪೂಜೆ ಸಲ್ಲಿಸಿದ ಸ್ವಸ್ತಿಶ್ರೀಗಳವರು ತ್ರಿಕೂಟ ಜಿನಾಲಯ ದರ್ಶನ ಮಾಡಿದರು. ಶ್ರವಣಬೆಳಗೊಳದ ಗುರುಕುಲ ವಿದ್ಯಾರ್ಥಿ-ವಿದ್ಯಾರ್ಥಿನಿಯರು, ಸೇವಾಸಂಘದವರು ಹೊಂಬುಜ ಅತಿಶಯ ಶ್ರೀಕ್ಷೇತ್ರದ ದರ್ಶನ ಮಾಡಿ, ಹೊಂಬುಜ ಶ್ರೀಗಳವರ ಆಶೀರ್ವಾದ ಪಡೆದರು.

ಇದೇ ಸಂದರ್ಭದಲ್ಲಿ ಶ್ರವಣಬೆಳಗೊಳ ಶ್ರೀಗಳವರು ಮಾವಿನ ಹಣ್ಣು ನೀಡುವ ಸಸಿಗಳನ್ನು ಶ್ರೀಕ್ಷೇತ್ರದಲ್ಲಿ ನೆಟ್ಟು, ನೀರುಣಿಸಿ, ಸದಾ ಹಸಿರು ಪರಿಸರ ಶೋಭಾಯಮಾನವಾಗಲೆಂದು ಹರಸಿದರು. ಹೊಂಬುಜ ಶ್ರೀಗಳವರು ಶ್ರವಣಬೆಳಗೊಳದ ಕರ್ಮಯೋಗಿ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯರಿಂದ ದೀಕ್ಷಾರ್ಥಿಗಳಾಗಿರುವುದರಿಂದ ಅವರ ದಿವ್ಯ ಮಾರ್ಗದರ್ಶನ, ಅಪೇಕ್ಷೆಗಳನ್ನು ಅನುಷ್ಠಾನಗೊಳಿಸುವ ಯೋಜನೆಗಳಲ್ಲಿ ಜೈನ ಸಮಾಜ, ಸಹಕಾರ ಸಹಯೋಗ ನೀಡುತ್ತಿರಲಿ ಎಂದು ಆಶಿಸುತ್ತಾ ಶ್ರವಣಬೆಳಗೊಳ ಶ್ರೀಗಳವರನ್ನು ಗೌರವಿಸಿ ಸನ್ಮಾನಿಸಿದರು.



**ಚಿಕ್ಕೋಡಿ:** ತಾಲ್ಲೂಕಿನ ಮಾಂಜರಿ ಗ್ರಾಮದ ಜೈನ ಸಮಾಜದ ಪ್ರಮುಖರು ಹಾಗೂ ಮಾಜಿ ಶಾಸಕರು ಹಾಗೂ ಶ್ರೀ ಕೆ.ಪಿ.ಮಗೆಣ್ಣವರ ಲಕ್ಷ್ಮೀಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ಲಿ., ಮಾಂಜರಿಯ ಸಂಸ್ಥಾಪಕರು ಹಾಗೂ ಶ್ರೀ ಕೆ. ಪಿ. ಮಗೆಣ್ಣವರ ಆಂಗ್ಲ ಮಾಧ್ಯಮ ಪ್ರಾಥಮಿಕ ಶಾಲೆಯ ಸಂಸ್ಥಾಪಕರಾದ ಶ್ರೀ ಕೆ. ಪಿ. ಮಗೆಣ್ಣವರ ಅವರು ಸಹಕಾರ ಕ್ಷೇತ್ರದಲ್ಲಿ ಹಾಗೂ ಶೈಕ್ಷಣಿಕ ಕ್ಷೇತ್ರಗಳಲ್ಲಿ ಮಾಡಿರುವ ಸೇವೆಯನ್ನು ಗುರುತಿಸಿ ಕರ್ನಾಟಕ ಸಹಕಾರ ಮಹಾಮಂಡಳದವರು ಬೆಂಗಳೂರಿನಲ್ಲಿ ನಡೆಸಿರುವ ಸಮಾರಂಭದಲ್ಲಿ ಕರ್ನಾಟಕದ ಮಾನ್ಯ ಮುಖ್ಯಮಂತ್ರಿಗಳು **"ಸಹಕಾರ ರತ್ನ"** ಪ್ರಶಸ್ತಿಯನ್ನು ನೀಡಿ ಗೌರವಿಸಿದರು



ಜಹಾ ಗವಂ ವಿಣಾ ವಚ್ಛೋ, ಹೋದಿ ರಾಯಂ ವಿಣಾ ಪಯಾ ।
ಗುರುಂ ವಿಣಾ ಣ ಸಣ್ಣಾಣಂ, ತಹ ಧಮ್ಮೋ ದಯಂ ವಿಣಾ ॥4॥

ಯಾವ ಪ್ರಕಾರ ಗೋವಿಲ್ಲದ ಕರು, ರಾಜನಿಲ್ಲದ ಪ್ರಜೆ, ಗುರುವಿಲ್ಲದೇ ಜ್ಞಾನವಾಗುವುದಿಲ್ಲವೋ ಅದೇ ಪ್ರಕಾರ ದಯೆಯೂ ಇಲ್ಲದೇ ಧರ್ಮವಾಗುವುದಿಲ್ಲ. (ದಯವೇ ಧರ್ಮದ ಮೂಲ)

ಜಿನ-ದನಿ

## ಬರಲಿರುವ ಪರ್ವದಿನಗಳು

ವಿಶ್ವಾವಸುನಾಮ ಸಂವತ್ಸರದ

ಮಾರ್ಗಶಿರಮಾಸ ಕೃಷ್ಣಪಕ್ಷ ತ್ರಯೋದಶಿಯಿಂದ ಪುಷ್ಯಮಾಸ ಕೃಷ್ಣಪಕ್ಷ ಚತುರ್ದಶಿಯವರೆಗೆ

**ಮಾರ್ಗಶಿರ ಮಾಸ**

ಡಿ. 17 ಬುಧ-ತ್ರಯೋದಶಿ-ವಿಶಾಖ
ಡಿ. 18 ಗುರು-ಚತುರ್ದಶಿ-ಅನುರಾಧ
ಡಿ. 19 ಶುಕ್ರ-ಅಮವಾಸ್ಯೆ-ಜೇಷ್ಠಾ

**ಪುಷ್ಯ ಮಾಸ**

ಡಿ. 20 ಶನಿ-ಅಮವಾಸ್ಯೆ-ಮೂಲ
ಡಿ. 21 ಭಾನು-ಪ್ರತಿಪದ-ಪೂ.ಷಾಢ
ಡಿ. 22 ಸೋಮ-ಬಿದಿಗೆ-ಉ.ಷಾಢ
ಡಿ. 23 ಮಂಗಳ-ತದಿಗೆ-ಉ.ಷಾಢ
ಡಿ. 24 ಬುಧ-ಚತುರ್ಥಿ-ಶ್ರವಣ
ಡಿ. 26 ಶುಕ್ರ-ಷಷ್ಠಿ-ಶತಭಿಷಾ
ಡಿ. 28 ಭಾನು-ಅಷ್ಟಮಿ-ಉ.ಭಾದ್ರ
ಡಿ. 29 ಸೋಮ-ನವಮಿ-ರೇವತಿ
ಡಿ. 30 ಮಂಗಳ-ದಶಮಿ-ಏಕಾದಶಿ-ಕೃತ್ತಿಕಾ
ಡಿ. 31 ಬುಧ-ದ್ವಾದಶಿ-ಕೃತ್ತಿಕಾ.
ಜ. 01 ಗುರು-ತ್ರಯೋದಶಿ-ರೋಹಿಣಿ
ಜ. 02 ಶುಕ್ರ-ಚತುರ್ದಶಿ-ಮೃಗಶಿರಾ
ಜ. 03 ಶನಿ-ಹುಣ್ಣಿಮೆ-ಆರಿದ್ರಾ
ಜ. 04 ಭಾನು-ಪ್ರತಿಪದ-ಪುನರ್ವಸು
ಜ. 05 ಸೋಮ-ಬಿದಿಗೆ-ಪುಷ್ಯ
ಜ. 06 ಮಂಗಳ-ತದಿಗೆ-ಆಶ್ಲೇಷಾ
ಜ. 07 ಬುಧ-ಚತುರ್ಥಿ-ಮಘಾ
ಜ. 08 ಗುರು-ಪಂಚಮಿ-ಪೂರ್ವಾ
ಜ. 09 ಶುಕ್ರ-ಷಷ್ಠಿ-ಉತ್ತರ
ಜ. 10 ಶನಿ-ಸಪ್ತಮಿ-ಹಸ್ತ
ಜ. 11 ಭಾನು-ಅಷ್ಟಮಿ-ಚಿತ್ತಾ
ಜ. 12 ಸೋಮ-ನವಮಿ-ಸ್ವಾತಿ
ಜ. 13 ಮಂಗಳ-ದಶಮಿ-ವಿಶಾಖ
ಜ. 14 ಬುಧ-ಏಕಾದಶಿ-ಅನುರಾಧ, ಶ್ರೀಕ್ಷೇತ್ರ ಕುಂದಾದ್ರಿ ವಾರ್ಷಿಕ ಜಾತ್ರಾ ಮಹೋತ್ಸವ, ಮಕರ ಸಂಕ್ರಾತಿ.
ಜ. 15 ಗುರು-ದ್ವಾದಶಿ-ಜ್ಯೇಷ್ಠಾ
ಜ. 16 ಶುಕ್ರ-ತ್ರಯೋದಶಿ-ಜ್ಯೇಷ್ಠಾ
ಜ. 17 ಶನಿ-ಚತುರ್ದಶಿ-ಮೂಲ.

## ಸಂಸ್ಥೆಯ ಬೆಳ್ಳಿ ಹಬ್ಬದ ಸಂಭ್ರಮ/ನೂತನ ಸಭಾಭವನ ಲೋಕಾರ್ಪಣೆ ಶೈಕ್ಷಣಿಕ ಸೌಲಭ್ಯಕ್ಕಾಗಿ 5 ಕೋಟಿ ಮಂಜೂರು



ಶಮನೇವಾಡಿ (ನ. 24): ಜೈನ ಸಮಾಜದ ಧರ್ಮನಗರಿ ಶಮನೇವಾಡಿ ಗ್ರಾಮಕ್ಕೆ ಈಗಾಗಲೇ ಕೋಟ್ಯಾಂತರ ರೂ. ಅನುದಾನ ತಂದು ಅಭಿವೃದ್ಧಿ ಕಾರ್ಯ ಪೂರ್ಣಗೊಳಿಸಲಾಗಿದೆ. ಜೈನ ಸಮಾಜದ ವತಿಯಿಂದ ಎರಡು ಎಕರೆ ಜಾಗ ನೀಡಿದರೆ ಮುಂಬರುವ ದಿನಗಳಲ್ಲಿ ಸುಸಜ್ಜಿತ ಶಾಲೆ, ಬಡವರಿಗಾಗಿ ಆಸ್ಪತ್ರೆ, ಸಮುದಾಯ ಭವನ, ಸೇರಿದಂತೆ ಸಕಲ ಸೌಲಭ್ಯ ಕಲ್ಪಿಸಲು ಸರ್ಕಾರದಿಂದ 5 ಕೋಟಿ ರೂ. ಅನುದಾನ ನೀಡಲಾಗುವುದು ಎಂದು ಸದಲಗಾ-ಚಿಕ್ಕೋಡಿ ಶಾಸಕ ಗಣೇಶ ಹುಕ್ಕೇರಿ ಹೇಳಿದರು.

ಸಮೀಪದ ಶಮನೇವಾಡಿ ಗ್ರಾಮದ ಶ್ರೀ ಪದ್ಮಾವತಿ ಅಲ್ಪಸಂಖ್ಯಾತರ ವಿವಿಧೋದ್ದೇಶಗಳ ಸಹಕಾರಿ ಸಂಘದ ಬೆಳ್ಳಿಹಬ್ಬ ಸಮಾರಂಭದಲ್ಲಿ ಪದ್ಮಾವತಿ ಭವನ ಲೋಕಾರ್ಪಣೆಗೊಳಿಸಿ ಅವರು ಮಾತನಾಡಿದರು.

ಶ್ರೀಗಳು ಮಾತನಾಡಿ, ಮಹಿಳೆಯರಿಂದ ಹುಟ್ಟಿಕೊಂಡ ಪದ್ಮಾವತಿ ಸಂಸ್ಥೆ ಪಾರದರ್ಶಕ ಆಡಳಿತದೊಂದಿಗೆ ಮುನ್ನಡೆಯುತ್ತಿದೆ. ಆರ್ಥಿಕ ಸಮೃದ್ಧಿಯೊಂದಿಗೆ ಯಶಸ್ಸಿನ ಮೆಟ್ಟಿಲೇರಿನಿಂತಿದೆ. ಸಂಸ್ಥೆ ಸುವರ್ಣ ಮಹೋತ್ಸವವನ್ನೂ ಯಶಸ್ವಿಯಾಗಿ ಆಚರಿಸಲಿ ಎಂದು ಹಾರೈಸಿದರು.

ವಿಧಾನ ಪರಿಷತ್ ಸದಸ್ಯ ಪ್ರಕಾಶ ಹುಕ್ಕೇರಿ ಅಧ್ಯಕ್ಷತೆ ವಹಿಸಿದ್ದರು. ಶ್ರೀಕ್ಷೇತ್ರ ಹೊಂಬುಜದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಸ್ವಾಮೀಜಿ, ವರೂರು ನವಗ್ರಹ ತೀರ್ಥದ ಪರಮಪೂಜ್ಯ ಸ್ವಸ್ತಿಶ್ರೀ ಧರ್ಮಸೇನ ಭಟ್ಟಾರಕ ಸ್ವಾಮೀಜಿ ಹಾಗೂ ಚಿಂಚಣಿ ಸಿದ್ಧಸಂಸ್ಥಾನ ಮಠದ ಉತ್ತರಾಧಿಕಾರಿ ಪರಮಪೂಜ್ಯ ಶ್ರೀ ಶಿವಪ್ರಸಾದ ದೇವರು ಅವರನ್ನು ಮೆರವಣಿಗೆಯೊಂದಿಗೆ ಮುಖ್ಯ ವೇದಿಕೆಗೆ ಬರಮಾಡಿಕೊಳ್ಳಲಾಯಿತು.

ಪದ್ಮಾವತಿ ಸಂಸ್ಥೆಯ ವತಿಯಿಂದ ಸದಸ್ಯರಿಗೆ ಬೆಳ್ಳಿ ಪದ್ಮಾವತಿ ಮೂರ್ತಿ ನೀಡಿ ಸನ್ಮಾನಿಸಲಾಯಿತು. ಮುಖ್ಯ ಅತಿಥಿಗಳಾಗಿ ಮಾಜಿ ಸಚಿವ ವೀರಕುಮಾರ ಪಾಟೀಲ, ಯುವ ನಾಯಕ ಉತ್ತಮ ಪಾಟೀಲ ಸೇರಿದಂತೆ ಸಂಸ್ಥೆಯ ಸದಸ್ಯರು ಗ್ರಾಮದ ಗಣ್ಯರು ಉಪಸ್ಥಿತರಿದ್ದರು. ವರ್ಧಮಾನ ಶಿರಗಣ್ಣವರ ನಿರೂಪಿಸಿದರು. ಸಂಚಾಲಕ ಉದಯ ಕುಮಾರ ತಪಕೀರೆ ವಂದಿಸಿದರು.

## ಭಾರತೀಯ ಜೈನ್‌ಮಿಲನ್ ವಲಯ-8
## ಬೆಂಗಳೂರು-ಮಲೆನಾಡು ವಿಭಾಗ ಮಟ್ಟದ ಜಿನಭಜನಾ ಸ್ಪರ್ಧೆ ಸೀಸನ್-9
# "ಮಕ್ಕಳಿಗೆ ಧಾರ್ಮಿಕ ಶಿಕ್ಷಣ ಅತ್ಯಗತ್ಯ"

ಪರಮಪೂಜ್ಯ ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ



**ಶಿವಮೊಗ್ಗ (ನ.16):** ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳ ವ್ಯಾಪ್ತಿಯ ಮಲೆನಾಡು ವಿಭಾಗದ ಜಿನಭಜನಾ ಸ್ಪರ್ಧೆಗಳು ನ. 16ರ ಭಾನುವಾರ ಇಲ್ಲಿಯ ಹೊಂಬುಜ ಶ್ರೀ ಪದ್ಮಾವತಿ ಜೈನ ಸಮುದಾಯ ಭವನದಲ್ಲಿ ನೆರವೇರಿತು. ಭಾರತೀಯ ಜೈನ್‌ಮಿಲನ್ ರಾಷ್ಟ್ರೀಯ ಕಾರ್ಯಾಧ್ಯಕ್ಷರಾದ ಶ್ರೀ ಡಿ. ಸುರೇಂದ್ರ ಕುಮಾರ್ ಮತ್ತು ಭಾರತೀಯ ಜೈನ್‌ಮಿಲನ್ ರಾಷ್ಟ್ರೀಯ ಉಪಾಧ್ಯಕ್ಷರಾದ ಶ್ರೀಮತಿ ಡಿ. ಅನಿತಾ ಸುರೇಂದ್ರ ಕುಮಾರ್‌ರವರು ಜಿನಭಜನಾ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಿದರು. ಪಿ. ಅಜಿತ್‌ಕುಮಾರ್, ವಿಲಾಸ್ ಪಾಸಣ್ಣವರ್, ಯಶೋಧರ ಹೆಗ್ಡೆ. ಕೆ ಉಪಸ್ಥಿತರಿದ್ದರು.

ಸಮಾರೋಪ ಸಮಾರಂಭದಲ್ಲಿ ಹೊಂಬುಜ ಜೈನಮಠದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮಿಗಳು ಸಾನಿಧ್ಯ ವಹಿಸಿ ಆಶೀರ್ವಚನ ನೀಡಿ, "ಭಾರತೀಯ ಆಧ್ಯಾತ್ಮ 14ನೆಯ ಶತಮಾನದವರೆಗೆ ಜ್ಞಾನಮಾರ್ಗದಲ್ಲಿ ಕಠಿಣವಾದ ತಪಸ್ಸುಗಳು, ವ್ರತಗಳು, ನಿಯಮಗಳ ಮೂಲಕ ಭಗವಂತನನ್ನು ತಲುಪುವ ಮಾರ್ಗವಾಗಿತ್ತು. ಹದಿನಾಲ್ಕನೆಯ ಶತಮಾನದ ನಂತರದಲ್ಲಿ ಭಗವಂತನ ಭಜನೆ ಕೀರ್ತನೆ ಮುಂತಾದ ಎಲ್ಲರಿಗೂ ಸುಲಭವಾದ ಭಕ್ತಿ ಮಾರ್ಗದಲ್ಲಿ ಸಾಗುತ್ತಾ ಬಂದಿದೆ. ಶತಮಾನಗಳಿಂದ ಭಜನೆ ಮತ್ತು ಭಕ್ತಿಗೀತೆಗಳು ಸ್ತೋತ್ರಗಳು ಭಾರತೀಯ ಆಧ್ಯಾತ್ಮಿಕ ಪರಂಪರೆಯಲ್ಲಿ ದೈನಂದಿನ ಅವಿಭಾಜ್ಯ ಅಂಗಗಳಾಗಿದ್ದವು. ಆದರೆ ಪ್ರಸ್ತುತದಲ್ಲಿ ಮಕ್ಕಳಿಗೆ ಲೌಕಿಕ ಶಿಕ್ಷಣಕ್ಕೆ ಮಾತ್ರ ಹೆಚ್ಚಿನ ಆದ್ಯತೆಯನ್ನು ನೀಡಲಾಗುತ್ತಿದೆ. ತಂದೆ-ತಾಯಿಯರು ಮಕ್ಕಳಿಗೆ ಲೌಕಿಕ ಶಿಕ್ಷಣದ ಜೊತೆಗೆ ಧಾರ್ಮಿಕ ಶಿಕ್ಷಣವನ್ನು ನೀಡಬೇಕು" ಎಂದರು.

WWW.HOMBUJAPADMAVATI.ORG

ಮುನಿರಾಜ ರೆಂಜಾಳ, ಕಾವ್ಯ ತೀರ್ಪುಗಾರರಾಗಿ ಸ್ಪರ್ಧಿಗಳಿಗೆ ಉತ್ತಮವಾದ ವಿಮರ್ಶೆಗಳನ್ನು ಮತ್ತು ಸಲಹೆಗಳನ್ನು ನೀಡಿದರು. ಹಿರಿಯರ ವಿಭಾಗದಲ್ಲಿ ಓಂಕಾರ್ ಜಿನಭಜನಾ ತಂಡ ಹೊರನಾಡು ಪ್ರಥಮ ಸ್ಥಾನ, ಸುಸ್ವರ ಜಿನಭಜನಾ ತಂಡ ಹೊರನಾಡು ದ್ವಿತೀಯ ಸ್ಥಾನ ಮತ್ತು ತೃತೀಯ ಸ್ಥಾನವನ್ನು ಶ್ರೀ ಶಾಂತಿನಾಥ ಜಿನಭಜನಾ ತಂಡ, ಮೇಗುಂದ ಹಾಗೂ ದಿವ್ಯಧ್ವನಿ ಜಿನಭಜನಾ ತಂಡ ಹೊರನಾಡು ಎರಡೂ ತಂಡಗಳು ಪಡೆದವು.

ಕಿರಿಯರ ವಿಭಾಗದಲ್ಲಿ ಪಾರಸ್ ಜಿನಭಜನಾ ತಂಡ ಮಂಡವಳ್ಳಿ ಪ್ರಥಮ ಸ್ಥಾನ, ಶುಭಸ್ವರ ಜಿನಭಜನಾ ತಂಡ ಹೊರನಾಡು ದ್ವಿತೀಯ ಸ್ಥಾನ ಮತ್ತು ತೃತೀಯ ಸ್ಥಾನವನ್ನು ಸಿದ್ಧಿ ಪದ್ಮಾವತಿ ಜಿನಭಜನಾ ತಂಡ ಹೊರನಾಡು ಹಾಗೂ ಸರ್ವತೋಭದ್ರ ಜಿನಭಜನಾ ತಂಡ ಸಾಗರ ಎರಡೂ ತಂಡಗಳು ಹಂಚಿಕೊಂಡವು. ವಿಜೇತ ತಂಡಗಳಿಗೆ ನಗದು ಪುರಸ್ಕಾರ ಮತ್ತು ಟ್ರೋಫಿಗಳನ್ನು ನೀಡಲಾಯಿತು. ಹಿರಿಯರ ವಿಭಾಗದಲ್ಲಿ – 28 ಮತ್ತು ಕಿರಿಯರ ವಿಭಾಗದಲ್ಲಿ – 13 ತಂಡಗಳು ಭಾಗವಹಿಸಿದ್ದವು

ಶಿವಮೊಗ್ಗ ಜೈನ್ ಮಿಲನ್ ಅಧ್ಯಕ್ಷರಾದ ಅಪ್ಪಣ್ಣಜ್ಜ ಎ.ಪಿ ಇವರು ಅಧ್ಯಕ್ಷತೆ ವಹಿಸಿದ್ದರು. ಪೂರ್ಣಿಮಾ ಅಶೋಕ್‌ಕುಮಾರ್ ನಿರೂಪಣೆ ಮಾಡಿದರು. ರೋಹಿಣಿ ಪ್ರಶಾಂತ ಪ್ರಾರ್ಥನೆ ಮಾಡಿದರು. ಸುಜಾತಾ ಪ್ರಶಾಂತ್ ವಂದಿಸಿದರು.

## ಡಾಕ್ಟರೇಟ್ ಪದವಿ ಪ್ರದಾನ



**ಬೆಳಗಾವಿ:** ಭರತೇಶ ಶಿಕ್ಷಣ ಸಂಸ್ಥೆಯ ಡಾ. ವಿನೋದ್ ಸುರೇಂದ್ರ ದೊಡ್ಡಣನವರ್ ಅವರು ಶಿಕ್ಷಣ ಕ್ಷೇತ್ರದಲ್ಲಿ ಸಲ್ಲಿಸಿದ ಸೇವೆಗಾಗಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪದವಿಯನ್ನು ಪಡೆದಿದ್ದಾರೆ. ಇವರು ಶಿಕ್ಷಣ ಸಂಸ್ಥೆಯಲ್ಲಿ ಸಾವಿರಾರು ವಿದ್ಯಾರ್ಥಿಗಳ ಸಾಧನೆಗೆ ಪ್ರೇರಣೆಯಾಗಿ ವಿದ್ಯಾರ್ಥಿಗಳ ವಿದ್ಯಾರ್ಜನೆ, ಅವರ ಭವಿಷ್ಯಕ್ಕೆ ಸಹಕಾರಿಯಾಗಿದ್ದಾರೆ. ಭರತೇಶ ಶಿಕ್ಷಣ ಸಂಸ್ಥೆಯ ಕಾರ್ಯವೈಕರಿ ಶ್ಲಾಘನೀಯವಾದುದು. ಇವರು ಕಲ್ಪಿಸಿದ ಭೌತಿಕ ಅವಕಾಶಗಳು, ಶಿಸ್ತು, ಭಯ, ಶೈಕ್ಷಣಿಕ ವಾತಾವರಣ ಇವೆಲ್ಲವೂ ಉತ್ತಮ ರೀತಿಯಲ್ಲಿ ಶಿಕ್ಷಣ ಸಂಸ್ಥೆ ಬೆಳೆಯಲು ಸಹಕಾರಿಯಾಗಿದೆ.

ಭರತೇಶ ಶಿಕ್ಷಣ ಸಂಸ್ಥೆಯು ಇನ್ನು ಮುಂದೆಯೂ ಉತ್ತಮ ಶಿಕ್ಷಣದ ಜೊತೆಗೆ ವ್ಯಕ್ತಿತ್ವ ವಿಕಸನ, ಸಂಸ್ಕಾರ, ಕೌಶಲ್ಯತೆಯನ್ನು ಬೆಳೆಸುವಂತಾಗಲೆಂದು, ಶಿಕ್ಷಣ ಪಡೆದ ವಿದ್ಯಾರ್ಥಿಗಳು ಮುಂದೆ ಉನ್ನತ ಹುದ್ದೆಯನ್ನು ಅಲಂಕರಿಸಿ ಶಿಕ್ಷಣ ಸಂಸ್ಥೆಯ ಕೀರ್ತಿಯನ್ನು ಹೆಚ್ಚಿಸಬೇಕೆಂದು ಅತಿಶಯ ಶ್ರೀಕ್ಷೇತ್ರ ಹೊಂಬುಜದ ಭಗವಾನ್ ಶ್ರೀ ಪಾರ್ಶ್ವನಾಥ ಸ್ವಾಮಿ, ಅಭೀಷ್ಟವರ ಪ್ರದಾಯಿನಿ ಯಕ್ಷಿ ಶ್ರೀಪದ್ಮಾವತಿ ದೇವಿ, ಜಿನವಾಣಿ ಸರಸ್ವತಿಯ ಅನುಗ್ರಹ ಸದಾ ಇರಲೆಂದು ಪರಮಪೂಜ್ಯ ಶ್ರೀಗಳವರು ಹರಸಿದ್ದಾರೆ.

## ಶ್ರವಣಬೆಳಗೊಳ ಶ್ರೀಗಳ ಸಾಗರ ನಗರಕ್ಕೆ ಪ್ರಪ್ರಥಮ ಪುರಪ್ರವೇಶ
# "ಪರೋಪಕಾರ ಜಗದ ಧರ್ಮವಾಗಬೇಕು"

-ಪ.ಪೂ. ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಮಹಾಸ್ವಾಮಿಗಳು









**ಸಾಗರ (ನ.26) :** ದಾನ ಮತ್ತು ಪೂಜೆ ಶ್ರಾವಕರ ಮುಖ್ಯ ಕರ್ತವ್ಯ. ಇದ್ದವರು ಇಲ್ಲದವರಿಗೆ ದಾನ ಮಾಡುವ ಪರೋಪಕಾರ ಮನೋಭಾವ ಬೆಳೆಸಿಕೊಳ್ಳಬೇಕು ಎಂದು ಶ್ರವಣಬೆಳಗೊಳ ಜೈನ ಮಠದ ಪರಮಪೂಜ್ಯ ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಭಟ್ಟಾರಕ ಮಹಾಸ್ವಾಮೀಜಿಗಳವರು ತಿಳಿಸಿದರು.

ಇಲ್ಲಿಯ ಜೈನಮಂದಿರದ ಆವರಣದಲ್ಲಿ ಸರ್ವತೋಭದ್ರ ಜೈನ ಸಮಾಜದ ವತಿಯಿಂದ ಮಂಗಲ ಪುರಪ್ರವೇಶದ ಅಂಗವಾಗಿ ಆಯೋಜಿಸಿದ್ದ ಸಭಾ ಕಾರ್ಯಕ್ರಮದಲ್ಲಿ ಶ್ರೀಗಳು ಗುರುವಂದನೆ ಸ್ವೀಕರಿಸಿ ಮಾತನಾಡಿದರು. ಜೈನಧರ್ಮ ಪರೋಪಕಾರವನ್ನು ಪ್ರತಿಪಾದಿಸಿಕೊಂಡು ಬಂದ ಧರ್ಮವಾಗಿದೆ. ದ್ವೇಷ ಅಸೂಯೆಗಳಿಂದ ಏನನ್ನು ಸಾಧಿಸಲು ಸಾಧ್ಯವಿಲ್ಲ. ಪರಸ್ಪರ ಪ್ರೀತಿ ವಿಶ್ವಾಸದಿಂದ ಜನರು ಬದುಕಬೇಕಾಗಿದೆ. ಜಗತ್ತಿನಲ್ಲಿ ಧರ್ಮ ಸಹಿಷ್ಣುತೆ ಬೇಕಾಗಿದೆ ಎಂದರು.

ಹೊಂಬುಜ ಜೈನಮಠದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮಿಗಳು ಆಶೀರ್ವಚನ ನೀಡಿ, ಅಭಿನವ ಚಾರುಕೀರ್ತಿ ಸ್ವಾಮಿಗಳ ನೇತೃತ್ವದಲ್ಲಿ ಶ್ರವಣಬೆಳಗೊಳದ ಕೀರ್ತಿ ಇನ್ನಷ್ಟು ಎತ್ತರಕ್ಕೆ ಏರುತ್ತದೆ. ಅತ್ಯಂತ ಕ್ರಿಯಾಶೀಲವಾಗಿ ಶ್ರೀಗಳು ಕೆಲಸ ಮಾಡುತ್ತಿದ್ದಾರೆ. ಸಾಗರ ಅತ್ಯಂತ ಸಂಭ್ರಮದಿಂದ ಶ್ರೀಗಳ ಮಂಗಲ ಪುರಪ್ರವೇಶದಲ್ಲಿ ಭಾಗಿಯಾಗಿದೆ. ಪ್ರತಿಯೊಂದು ಮನೆಯಲ್ಲೂ ಸಮಾಜಕ್ಕೆ ಕೊಡುಗೆ ನೀಡುವಂತಹ ವ್ಯಕ್ತಿತ್ವ ಬೆಳೆಸುವ ಕೆಲಸವಾಗಬೇಕು ಎಂದರು.

ಸೋಂದ ಜೈನಮಠದ ಪರಮಪೂಜ್ಯ ಸ್ವಸ್ತಿಶ್ರೀ ಅಕಲಂಕಕೇಸರಿ ಭಟ್ಟಾಕಲಂಕ ಭಟ್ಟಾರಕ ಮಹಾಸ್ವಾಮಿಗಳು ಆಶೀರ್ವಚನ ನೀಡಿ, ಸಾಧನೆಗೆ ಮನದ ಇಚ್ಛೆ ಮುಖ್ಯವಾಗಿದೆ. ಅದಕ್ಕೆ ಪೂರಕವಾಗಿ ಪ್ರೋತ್ಸಾಹ ಮಾರ್ಗದರ್ಶನದ ಅವಶ್ಯಕತೆ ಇದೆ. ಚಿಕ್ಕವಯಸ್ಸಿನಲ್ಲಿಯೆ ಶ್ರೀಗಳ ಆಚಾರ ವಿಚಾರ, ನಡೆ-ನುಡಿ, ಇಂದು ಜಗತ್ತಿಗೆ ಬೆಳಕಾಗುತ್ತಿದೆ. ಕಿರಿಯ ವಯಸ್ಸಿನಲ್ಲಿಯೇ ಇಂತಹ ಹಿರಿದಾದ ಜವಬ್ದಾರಿಯನ್ನು ಹೊಂದಿರುವುದು ವಿಶೇಷವಾಗಿದೆ. ಜೈನ ಧರ್ಮದ ಸಿದ್ದಾಂತಗಳು ಜಗದಗಲ ಬೆಳಗಲಿ ಎಂದು ಆಶೀರ್ವಚನ ನೀಡಿದರು.

ಸಾಗರ ವಿಧಾನಸಭಾ ಕ್ಷೇತ್ರದ ಶಾಸಕರಾದ ಗೋಪಾಲಕೃಷ್ಣ ಬೇಳೂರು, ಮಾಜಿ ಶಾಸಕ ಹರತಾಳು ಹಾಲಪ್ಪ ಮಾತನಾಡಿದರು. ವೇದಿಕೆಯಲ್ಲಿ ಸರ್ವತೋಭದ್ರ ಜೈನ ಸಮಾಜದ ಅಧ್ಯಕ್ಷ ಗಜೇಂದ್ರಜೈನ್ ಅಧ್ಯಕ್ಷತೆಯನ್ನು ವಹಿಸಿದ್ದರು. ವೇದಿಕೆಯಲ್ಲಿ ಹೆಚ್.ಎಂ. ವೀರರಾಜಯ್ಯ ಜೈನ್, ವೀರೇಂದ್ರಕುಮಾರ್, ಚಂದ್ರಕಲಾ ಜೈನ್, ಭಗನ್‌ಲಾಲ್ ಹಾಜರಿದ್ದರು. ಬೆಳ್ಳಿಗ್ಗೆ ಶ್ರೀಗಳ ಪುರಪ್ರವೇಶ ಅಂಗವಾಗಿ ತ್ಯಾಗರ್ತಿ ವೃತ್ತದಿಂದ ಬೈಕ್ ಮತ್ತು ಕಾರು ರ್‍ಯಾಲಿ, ನಂತರ ಶ್ವೇತಾಂಬರ ಬಸ್ತಿಯಿಂದ ಜೈನ ಬಸದಿಯವರೆಗೆ ವಿವಿಧ ಕಲಾತಂಡಗಳೊಂದಿಗೆ ಶ್ರೀಗಳ ಭವ್ಯ ಮೆರವಣಿಗೆ ನಡೆಯಿತು.

ಮಹಿಳಾ ಸಮಾಜದವರು ಸ್ವಾಗತ ಗೀತೆಯನ್ನು ಹಾಡಿದರು. ಜ್ಯೋತಿ ನೇಮಿರಾಜ್ ಸ್ವಾಗತಿಸಿ. ಡಾ. ಮಹಾವೀರ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಡಾ. ಸಂಪತ್ ಕುಮಾರ್ ಶ್ರೀಗಳ ಕುರಿತು ಗುರುವಂದನಾ ನುಡಿಗಳನ್ನಾಡಿದರು. ಯಶೋಧರ ಇಂದ್ರ ಅಭಿನಂದನ ಪತ್ರ ವಾಚಿಸಿದರು. ವಿ.ಟಿ.ಸ್ವಾಮಿ ವಂದಿಸಿ, ಕುಮುದಾ ಕಾರ್ಯಕ್ರಮ ನಿರೂಪಿಸಿದರು. ಈ ಸಂದರ್ಭದಲ್ಲಿ ಅನೇಕ ಗಣ್ಯರು ಹಾಗೂ ಜೈನ ಸಮಾಜದ ಗಣ್ಯರು ಸಾವಿರಾರು ಸಂಖ್ಯೆಯಲ್ಲಿ ಶ್ರಾವಕ,ಶ್ರಾವಕೀಯರು ಹಾಗೂ ಸಾರ್ವಜನಿಕರು ಹಾಜರಿದ್ದರು. ಸಾಗರದ ಆದಿನಾಥ ಜಿನಮಂದಿರಲ್ಲಿ ಶ್ರೀಗಳು ರಜತ ಪ್ರಭಾವಳಿಯನ್ನು ಸಮರ್ಪಿಸಿದರು.

## ಶ್ರೀ ಪದ್ಮಾಂಬಾ ಜೈನ ದಿನದರ್ಶಿಕೆ-2026 ಬಿಡುಗಡೆ-ಮಾರಾಟಕ್ಕೆ ಲಭ್ಯ




ಅತಿಶಯ ಶ್ರೀಕ್ಷೇತ್ರ ಹೊಂಬುಜದಿಂದ ಕನ್ನಡ ಭಾಷೆಯಲ್ಲಿ ಪ್ರಕಟಿಸಲ್ಪಡುವ ಶ್ರೀ ಪದ್ಮಾಂಬಾ ಜೈನ ದಿನದರ್ಶಿಕೆ-2026 ಸ್ವಸ್ತಿಶ್ರೀಗಳವರು ಬಿಡುಗಡೆಗೊಳಿಸಿದರು. ಪ್ರತಿಯೊಂದು ದಿನದ ಧಾರ್ಮಿಕ ಮಹತ್ವವನ್ನು ಆಚರಿಸುವುದು ಪ್ರತಿಯೋರ್ವರ ಧರ್ಮ ಮತ್ತು ಕರ್ತವ್ಯ ಎಂದು ಶುಭ ಹಾರೈಸಿದರು. ಪ್ರಕಟಗೊಂಡಿರುವ "ಶ್ರೀ ಪದ್ಮಾಂಬಾ ಜೈನ ದಿನದರ್ಶಿಕೆ" ಶ್ರೀಕ್ಷೇತ್ರದಲ್ಲಿ ಲಭ್ಯವಿದೆ. ದಿನದರ್ಶಿಕೆಯ ಬೆಲೆ 50/- ಅಂಚೆಯ ಮೂಲಕ ಪಡೆಯಲಿಚ್ಛಿಸುವವರು ಅಂಚೆ ವೆಚ್ಚ ಸೇರಿ ರೂ. 80/-ಶ್ರೀಮಠದ ವಿಳಾಸಕ್ಕೆ ಕಳುಹಿಸಿದಲ್ಲಿ ಅಂಚೆ ಮೂಲಕ ಕಳುಹಿಸಲಾಗುವುದು.

## ಶ್ರೀಕ್ಷೇತ್ರಪಾಲ ದೇವರ ಪ್ರತಿಷ್ಠಾಪನೆ



**ಎಲೆಕ್ಯಾನತಹಳ್ಳಿ (ನ. 30) :** ಇಲ್ಲಿಯ ಭಗವಾನ ಶ್ರೀ 1008 ಆದಿನಾಥ ಸ್ವಾಮಿ ದಿಗಂಬರ ಜೈನ ಬಸದಿಯ ಅನಂತಮ್ಮ ಟ್ರಸ್ಟ್‌ನ ವತಿಯಿಂದ ದಿನಾಂಕ 30-11-2025ರ ಭಾನುವಾರದಂದು ಹೊಂಬುಜ ಜೈನ ಮಠದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಗಳವರ ಪಾವನ ಸಾನಿಧ್ಯ ಹಾಗೂ ನೇತೃತ್ವದಲ್ಲಿ ಶ್ರೀಕ್ಷೇತ್ರಪಾಲ ದೇವರ ಪ್ರತಿಷ್ಠಾಪನೆಯು ಅದ್ದೂರಿಯಾಗಿ ನೆರವೇರಿತು.

ಅಂದು ಮಂಗಳವಾದ್ಯ, ಬೆಳಿಗ್ಗೆ 6.30ಕ್ಕೆ ಶ್ರೀ ಆದಿನಾಥ ಸ್ವಾಮಿಗೆ ನಿತ್ಯಾಭಿಷೇಕ, 8.00 ಗಂಟೆಗೆ ಕ್ಷೇತ್ರಪಾಲ ಆರಾಧನಾ ಪೂರ್ವಕ ಪ್ರತಿಷ್ಠಾಪನೆ, 9.30ಕ್ಕೆ ಶ್ರೀ ಆದಿನಾಥ ಸ್ವಾಮಿಗೆ ಪಂಚಾಮೃತ ಅಭಿಷೇಕ, ನಂತರ ಶ್ರೀಗಳ ಸಾನಿಧ್ಯದಲ್ಲಿ ಧಾರ್ಮಿಕ ಸಭಾ ಕಾರ್ಯಕ್ರಮ ನೆರವೇರಿತು. ಧಾರ್ಮಿಕ ಸಭಾಕಾರ್ಯಕ್ರಮದಲ್ಲಿ ಎಲೆಕ್ಯಾತನಹಳ್ಳಿ ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯ 7ನೇ ತರಗತಿಯಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆ ಕಾರ್ಯಕ್ರಮ ನೆರವೇರಿತು.

ವಿಧಿ-ವಿಧಾನಗಳನ್ನು ಪುರೋಹಿತರಾದ ಪ್ರತಿಷ್ಠಾಚಾರ್ಯ ಶ್ರೀವರ್ಧಮಾನ ಇಂದ್ರ, ಸ್ಥಳೀಯ ಪುರೋಹಿತರಾದ ಶ್ರೀ ಆಕಾಶ್ ಜೈನ್ ನೆರವೇರಿಸಿದರು. ಟ್ರಸ್ಟಿಗಳಾದ ಡಾ. ಪಿ.ಜೆ. ಪ್ರಕಾಶ್, ಡಿ.ಎನ್. ಅಜಿತ್ ಪ್ರಸಾದ್‌ರವರು ಉಪಸ್ಥಿತರಿದ್ದರು.

ಅನಂತಮ್ಮ ಟ್ರಸ್ಟ್ (ರಿ.) ಮತ್ತು ಎಲೆಕ್ಯಾತನಹಳ್ಳಿಯ ಸಮಸ್ತ ಶ್ರಾವಕ-ಶ್ರಾವಕಿಯರು ಹಾಗೂ ಊರಿನ ಗ್ರಾಮಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

**ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮೀಜಿಗಳವರ ಅಪೇಕ್ಷೆ, ಸೂಚನೆಯಂತೆ ಕರ್ನಾಟಕ ರಾಜ್ಯಾದ್ಯಂತ ಶಿಥಿಲವಾದ, ಪಾಳು ಬಿದ್ದಿರುವ, ವಾರುಸುದಾರರಿಲ್ಲದ, ಭಗ್ನ ಹಾಗೂ ಪ್ರಾಚೀನ ಜಿನಮಂದಿರಗಳ ನವೀಕರಣ/ ಜೀರ್ಣೋದ್ಧಾರ ಆಗಬೇಕಾಗಿದ್ದು, ತಮ್ಮ ವಿಭಾಗದ ವ್ಯಾಪ್ತಿಯಲ್ಲಿರುವ ಈ ಕೆಳಕಂಡಂತೆ ಅವುಗಳ ವಿವರಗಳನ್ನು ಸಂಗ್ರಹಿಸಿ ತಾಲ್ಲೂಕು/ ಹೋಬಳಿಯ ವಿಂಗಡಣೆಯೊಂದಿಗೆ ಕರ್ನಾಟಕ ಜೈನ ಅಸೋಸಿಯೇಷನ್‌ಗೆ ಆದಷ್ಟು ಬೇಗ 30-35 ದಿನಗಳೊಳಗೆ ಕಳುಹಿಸಿಕೊಡಲು ಈ ಮೂಲಕ ವಿನಂತಿಸಲಾಗಿದೆ.**

**ವಿವರಗಳು ಬಂದ ನಂತರ, ಎಲ್ಲವನ್ನೂ ಕ್ರೋಢೀಕರಿಸಿ, ರಾಜ್ಯಾದ್ಯಂತ ಬಸದಿಗಳ ಸಮಗ್ರ ಮಾಹಿತಿಗಳನ್ನು ಪ್ರಕಟಿಸುವುದರ ಜತೆಗೆ ನಮ್ಮ ಘನ ಸರ್ಕಾರಕ್ಕೆ ಅವುಗಳ ಜೀರ್ಣೋದ್ಧಾರಕ್ಕೆ ಅವಶ್ಯಕ ಅನುದಾನ ನೀಡುವಂತೆ ಪ್ರಸ್ತಾವನೆ ಸಲ್ಲಿಸಲು ಸಹಾಯಕವಾಗುವುದೆಂದು ಕೆ.ಜೆ.ಎ. ಕಾರ್ಯದರ್ಶಿಗಳವರು ತಿಳಿಸಿದ್ದಾರೆ.**

**1) ಊರಿನ ಹೆಸರು 2) ಬಸದಿಯ ಹೆಸರು 3)ನಿರ್ಮಾಣ ಕಾಲ 4) ಬಸದಿಯ ಈಗಿನ ಸ್ಥಿತಿ 5) ಅಂದಾಜು ವಾರ್ಷಿಕ ಆದಾಯ 6) ಮೂಲ ಮೂರ್ತಿಯ ಹೆಸರು 7) ಮೂಲ ಮೂರ್ತಿಯ ರಚನೆ (ಶಿಲೆ/ಕಂಚು/ಪಂಚಲೋಹ) 8) ವಾರಸುದಾರರ ಹೆಸರು, ಮೊಬೈಲ್ ಸಂಖ್ಯೆ 9) ಪುರೋಹಿತರ ಹೆಸರು, ಮೊಬೈಲ್ ಸಂಖ್ಯೆ ಅವಶ್ಯಕ ವಿವರಗಳನ್ನು ನೀಡಲು ಕೋರಿದೆ.**







ಗುರುದೇವ **GURUDEVA MONTHLY**

RNI No. 13248/57-POSTEL REGD No. KA/SK/SMG 198/2024-26
Date of Posting 17th of every month. Sub Post office, Humcha - 577436
Licensed to post without prepayment Licence No: SK/WPP/226/2024-26

ವಾರ್ಷಿಕ ಚಂದಾ : ರೂಪಾಯಿ 150-00 ಮತ್ತು ಆಜೀವ ಸದಸ್ಯತ್ವಕ್ಕೆ : ರೂಪಾಯಿ 1000-00 ಮಾತ್ರ

ವ್ಯವಸ್ಥಾಪಕರು, "ಗುರುದೇವ" ಕಾರ್ಯಾಲಯ, ಅಂಚೆ : ಹೊಂಬುಜ, ಶಿವಮೊಗ್ಗ-ಜಿಲ್ಲೆ, ಕರ್ನಾಟಕ-೫೭೭೪೩೬

Edited, Published & Printed by Sri C.D. Ashok Kumar, on behalf of Swasthishree Devendrakeerthi Bhattaraka Pattacharyavarya Swamiji, Sri Hombuja Jain Math
Printed at Sri Mahaveer Printing Press, J.P.N. Road, Durgigudi, Shimoga (Ph: 08182- 222044) and Published at Gurudeva Karyalaya Sri Hombuja Jain Math
Post: Humcha, Tq. Hosanagar., Dist. Shimoga-577436 Ph : 08185-262722